ನಳಿನಿ ಆರ್. ಮಾಗಲ್, ಸಕಲೇಶಪುರ

*ಫೇಸ್‌ಬುಕ್ ಬಂದಮೇಲೆ ಸಂಬಂಧಗಳು ಹತ್ತಿರವಾದವಾ ಅಥವಾ ಫೇಸ್ ಔಟ್ ಆದವಾ?*



ಸಂಬಂಧ ಇಲ್ಲವೇ ಇಲ್ಲ; ಫೇಸ್ ಬುಕ್‌ನಲ್ಲಿ ಹೆಂಡತಿಯೂ ಫ್ರೆಂಡೇ!

ಬಾ.ರಂ. ಸುರೇಶ, ಶಿವಮೊಗ್ಗ

*ಬಡತನ, ಸಿರಿತನ ಇವುಗಳ ನೆಂಟಸ್ತಿಕೆ ಯಾವಾಗ ಏರ್ಪಡಬಹುದು?*

ಹಲವಾರು ಹೆಂಗಳೆಯರಲ್ಲಿ ಈಗಲೇ ಏರ್ಪಟ್ಟಿದೆಯಲ್ಲ! ಬಡ ನಡುವಿನ ವರೆಗೆ ನೀಳ ಕೇಶಸಿರಿ!

ಆರ್. ಮಧುಸೂದನ್, ಹಾಸನ

*ಅಂದಿನ ಬಳಪಕ್ಕೂ, ಇಂದಿನ ಮೌಸ್‌ಗೂ ವ್ಯತ್ಯಾಸವೇನು ಗುರುವರ್ಯ?*

ಬಳಪ ಆ ಕಾಲಕ್ಕೆ ತಕ್ಕಂತೆ ಸಂಘಜೀವಿ (ಬಳಪದ ಪ್ಯಾಕೆಟ್ ಇರುತ್ತಿತ್ತು). ಮೌಸ್ ಈ ಕಾಲಕ್ಕೆ ತಕ್ಕಂತೆ ಒಂಟಿ!

ಡಾ. ಕೆ.ಕೆ. ಜಯಚಂದ್ರಗುಪ್ತ, ಹಾಸನ

*ಯಮರಾಜನ ನ್ಯಾಯಾಲಯದಲ್ಲಿ ವಕೀಲರಿಗೆ ಅವಕಾಶ ಉಂಟೆ?*



ಊಹೂಂ. ಯಮನಲ್ಲಿಗೆ ಬರುವ ಎಲ್ಲವೂ ಕೇಸ್ ಕ್ಲೋಸ್ಡ್ ಆಗಿರುವಂತಹವೇ.

ಜೆ.ಆರ್.ಆದಿನಾರಾಯಣಮುನಿ, ಬೆಂಗಳೂರು

*ಯೌವ್ವನ ಏನು ಮಾಡುತ್ತದೆ?*

ವನವಾಗಬಹುದಾದ ಜೀವನವನ್ನು ಉದ್ಯಾನವನ ಮಾಡುತ್ತದೆ.

ಬಿ.ಚಂದ್ರೇಗೌಡ, ಬೆಂಗಳೂರು

*ವಧು ಪರೀಕ್ಷೆ ಇರುವಂತೆ ವರ ಪರೀಕ್ಷೆ ಯಾಕಿಲ್ಲ?*

ಸ್ತ್ರೀಯರು ಟೆಸ್ಟ್ ಮಾಡುವುದಿಲ್ಲ!

ಎಸ್.ಜಿ. ಕರನಂದಿ, ಹುನಗುಂದ

*ಹಾಲಾಹಲಕ್ಕೂ, ಆಲ್ಕೋಹಾಲ್‌ಗೂ ಇರುವ ವ್ಯತ್ಯಾಸವೇನು?*

ಒಂದು ನೀಲ ಕಂಠಕ್ಕೆ ನಾಂದಿ; ಇನ್ನೊಂದು ನೀಳ ಕಂಟಕಕ್ಕೆ ಹಾದಿ.

ಎಂ.ಎಸ್. ಧರ್ಮೇಂದ್ರ, ದೊಡ್ಡಮಗ್ಗೆ

*ಹೆಣ್ಣಿನ ಹೃದಯ ಮತ್ತು ಹವಾಮಾನ ಏಕಾಏಕಿ ಬದಲಾಗಲು ಕಾರಣವೇನು?*

ಋತು ಪ್ರಭಾವ!

ಡೈರಿ ವಿಶ್ವನಾಥ್, ಬೆಂಗಳೂರು

*ಜೀವನ ಸಾಕು ಅನ್ನಿಸುವುದು ಯಾವಾಗ?*

ಜೀ ಎನ್ನುವವರು ಇಲ್ಲವಾಗಿ, ವನ ಮಾತ್ರ ಕಂಡಾಗ.

ಅಮರಯ್ಯಾ ಪತ್ರಿಮಠ, ಸುರಪೂರ

*ಕೆಲವು ಕೊಳಕು ಮನಸ್ಸಿನವರಿಗೆ ಯಾವ ಮರದಡಿ ಕುಳಿತರೆ ಜ್ಞಾನೋದಯ ಆದೀತು?*

ಗೃಹಚಾ–ಮರ–ದಡಿ ಎಂದಳೊಬ್ಬ ಕೆರಳಿದ ಹೆಣ್ಣು.

ರತ್ನಜ, ಮೈಸೂರು

*ಗಂಡಸರನ್ನು ತಮ್ಮ ನಿಯಂತ್ರಣದಲ್ಲಿ ಇಟ್ಟುಕೊಳ್ಳುವ ಮಹಿಳೆಯರ ನಿಯಂತ್ರಣದಲ್ಲಿ ಇಲ್ಲದಿರುವುದು ಯಾವುದು?*

ಅದೇ ಗಂಡಸರ ಚಪಲಚಿತ್ತ.

ಕೆ.ಎನ್. ನಾರಾಯಣರೆಡ್ಡಿ, ಕೆ.ಜಿ.ಎಫ್.

*ದೇವರ ಪೂಜೆಗೂ, ವರ ಪೂಜೆಗೂ ಇರುವ ವ್ಯತ್ಯಾಸವೇನು?*

ಎರಡೂ ಕಡೆ ಹಾರ ಇದ್ದರೂ ಅರ್ಥ ವ್ಯತ್ಯಾಸ ಸಾಧ್ಯ– ಇಲ್ಲಿ ಮಾಲೆ; ಅಲ್ಲಿ ಬಲಿ!

ಎಸ್.ಎ. ಮೋಹನರಾಜು, ಶಿವಮೊಗ್ಗ

*ತನಗಾಗಿ ಮತ್ತು ತನ್ನವರಿಗಾಗಿ ಮಾತ್ರ ಜೀವಿಸುವವರನ್ನು ಏನನ್ನಬೇಕು?*

ಏನು ಬೇಕಾದರೂ ಅನ್ನಿ. ಅದಕ್ಕೆಲ್ಲ ಗಮನ ನೀಡಿದರೆ ಅವರು ಹಾಗಿರಲು ಆಗುವುದಿಲ್ಲ.

ಸೋಮಶೇಖರ್, ಎಲೆಮುದ್ದೇನಹಳ್ಳಿ

*ಪ್ಲಾಸ್ಟಿಕ್ ಅಕ್ಕಿ, ಸಕ್ಕರೆ ಆಯಿತು. ಮುಂದೇನು ಬರಬಹುದು?*

ಅವುಗಳು ನುಣ್ಣಗಾಗುವಂತೆ ಅಗಿಯಲು ಗ್ರೈಂಡರ್ ಹಲ್ಲೆಟ್ಟು.

## ಬಹುಮಾನಿತ ಪ್ರಶ್ನೆ

ಎಚ್.ಆರ್. ದೇಸಾಯಿ, ರಾಯಚೂರು

*ಪೊಲೀಸರು ರೌಡಿಗಳ ಜೊತೆ, ಕಳ್ಳರ ಜೊತೆ ಗ್ರೂಪ್ ಫೋಟೋ ಏಕೆ ತೆಗೆಸಿಕೊಳ್ಳುತ್ತಾರೆ?*

ವಧು ವರನೊಡನೆ ತೆಗೆಸಿಕೊಳ್ಳುವುದಿಲ್ಲವೆ! ಅವರವರ ಬೇಟೆ ಅವರವರಿಗೆ ಪ್ರೀತಿ!

ಹೆಚ್.ಆರ್. ಕಡಿವಾಲ, ಬದಾಮಿ

*ಚುನಾವಣಾ ಸಮಯದಲ್ಲಿ ಬರುವ ರಾಜಕಾರಣಿಗಳು ನಂತರ 4 ವರ್ಷ ಮುಖವನ್ನೇ ತೋರುವುದಿಲ್ಲವಲ್ಲಾ...?*

ಧೂಮಕೇತುಗಳೇ ಹಾಗೆ. ಇಂತಿಷ್ಟು ವರ್ಷಕ್ಕೊಮ್ಮೆ ಮಾತ್ರ ಬರುವುದು ಅವುಗಳ ಲಕ್ಷಣ.

ಎ. ಕೃಷ್ಣಾನಂದ ಶೆಟ್ಟಿ, ಮಂಗಳೂರು

*ತಿಥಿಗೂ, ಅತಿಥಿಗೂ ಏನು ಅಂತರ ಮೇಡಂ?*

ಅತಿಥಿ ಅತಿ ಕಾಲ ಇದ್ದರೆ ತಿಥಿ.

ಫಾಲನೇತ್ರ ಸಜ್ಜನ, ಶಿರಸಿ

*ಭಾರತ, ಹಿಂದೂಸ್ತಾನ, ಇಂಡಿಯಾ ಎಂಬ ಮೂರು ಹೆಸರಲ್ಲಿ ನಿಮಗೆ ಇಷ್ಟವಾದುದು ಯಾವುದು ಮತ್ತು ಏಕೆ?*



ಹಿಂದೂಸ್ತಾನವೇ; ರಾಜನಿಂದ, ವಿದೇಶಿಯರಿಂದ ಪಡೆದ ಹೆಸರಿಗಿಂತ ಚಿರನೂತನ ನದಿಯಿಂದ ಪಡೆದ ಹೆಸರೇ ಚೆಂದ.

ಕೆ.ಯಂ. ವೀರೇಶ್, ಕೂಡ್ಲಿಗಿ

*ಮಂತ್ರವಾದಿ, ಬಾಬಾ, ಫಕೀರರು ನವಿಲುಗರಿಗಳ ಕಟ್ಟನ್ನು ಹಿಡಿದಿರಲು ಕಾರಣವೇನು?*

ಅದರಲ್ಲಿರುವಂತೆಯೇ ಬಣ್ಣಬಣ್ಣದ ಮಾತುಗಳಿಂದ ಆಕರ್ಷಿಸುತ್ತೇವೆ ಎಂದು ಸೂಚಿಸಲು.

ಬಿ. ಚಂದ್ರೇಗೌಡ, ಬೆಂಗಳೂರು

*ಮಾತೃಭಾಷೆ ಇರುವಂತೆ ಪಿತೃಭಾಷೆ ಏಕಿಲ್ಲ?*

ಇದೆಯಂತೆ. ಆದರೆ ಮಾತೃವೇ ಮಾತನಾಡುತ್ತಿದ್ದು, ಪಿತೃವಿಗೆ ಬಾಯಿ ಬಿಡಲೇ ಅವಕಾಶವಾಗಿಲ್ಲವಂತೆ.

■ ರಾಮ್